## ದಿನಾಂಕ:29-10-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 10 (122)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:141 (ಹಳೆ ವಾರ್ಡ್ ಸಂಖ್ಯೆ:45) ರ ವಿಠಲನಗರ (ವಾಲ್ಮೀಕಿನಗರ) ದಲ್ಲಿನ 2ನೇ ಮುಖ್ಯರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ:90/15-2 ರ (25x25) ಚ.ಅಡಿಗಳ ಖಾಲಿ ನಿವೇಶನವು ಶ್ರೀ. ಕೆ.ವಿ.ಮಲ್ಲಿಕ್ ರವರಿಗೆ ಸೇರಿದ್ದು, ಇದನ್ನು ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ನಗರ ಪಾಲಿಕೆಯ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ:20-11-1984 ರಂದು ವಿಷಯದ ಸಂಖ್ಯೆ:7(523) ರಲ್ಲಿ ಅಂಗೀಕಾರ ನೀಡಿದ್ದು, ಈ ನಿವೇಶನಕ್ಕೆ ಬದಲಾಗಿ ಬದಲಿ ನಿವೇಶನವನ್ನು ಅರ್ಜಿದಾರರಿಗೆ ಬೇರೆ ಸ್ಥಳದಲ್ಲಿ ನೀಡುವುದೆಂದು ತೀರ್ಮಾನಿಸಿ, ಸದರಿ ಕಾಮಗಾರಿ ಸ್ಥಾಯಿ ಸಮಿತಿಯು ನಿರ್ಣಯವನ್ನು ದಿನಾಂಕ:10-01-1986 ರಂದು ನಡೆದ ನಗರ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ:12(704) ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ತದನಂತರ, ಪ್ರಸ್ತಾಪಿತ ಸ್ವತ್ತಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರಕ್ಕೆ ದಿನಾಂಕ:22-02-1986 ರಂದು ಸಲ್ಲಿಸಿದ್ದು, ಅನೇಕ ಪತ್ರ ವ್ಯವಹಾರ ನಡೆದು, ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ವನಇ/143/ಎಂಎನ್‌ವೈ-86, ದಿನಾಂಕ:23-01-1991 ಮತ್ತು 31-10-1991 ರಂದು ಕೆಲವೊಂದು ಸ್ಪಷ್ಟೀಕರಣ ಕೇಳಿ ಹಿಂತಿರುಗಿಸಿದೆ. ಸರ್ಕಾರದ ಈ ಪತ್ರಗಳಿಗೆ ಉತ್ತರಿಸದೇ ಇರುವುದರಿಂದ, ಈ ಸ್ವತ್ತನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಪಾಲಿಕೆಯ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಇದುವರೆವಿಗೂ ಆಗಿರುವುದಿಲ್ಲ.

ಆದರೆ, ಸ್ವತ್ತಿನ ಮಾಲೀಕರು ನಗರ ಪಾಲಿಕೆಯ ನಿರ್ಣಯದಂತೆ, ಬದಲಿ ನಿವೇಶನವನ್ನು ನೀಡುವಂತೆ ಕೋರಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ:2704/91 ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ. ಆದರೆ, ಮಹಾನಗರ ಪಾಲಿಕೆಯ ವಿಷಯದ ಸಂಖ್ಯೆ:37(233) ದಿನಾಂಕ:23-11-1991 ರಂದು ನಿರ್ಣಯಿಸಿ, ಬದಲಿ ನಿವೇಶನವನ್ನು ನೀಡುವ ಅಂಶವನ್ನು ಮಾರ್ಪಡಿಸಿ, ಭೂಸ್ವಾಧೀನ ಮಾಡಿಕೊಂಡ ಆಸ್ತಿಗೆ ನಗದು ಪರಿಹಾರ ಧನವನ್ನು, ಅದರ ಮಾಲೀಕತ್ವವನ್ನು ಸಾಬೀತುಪಡಿಸಿಕೊಂಡು ನೀಡಬೇಕೆಂದು ತೀರ್ಮಾನಿಸಿಲಾಗಿರುತ್ತದೆ. ಶ್ರೀ.ಮಲ್ಲಿಕ್ ರವರು ಸಿಟಿ ಸಿವಿಲ್ ನ್ಯಾಯಾಲಯದ ಮೊಕದ್ದಮೆಯನ್ನು ದಿನಾಂಕ:14-09-1993 ರಲ್ಲಿ ವಾಪಸ್ಸು ಪಡೆದುಕೊಂಡು, ದಿನಾಂಕ:23-11-1991 ರ ಪಾಲಿಕೆಯ ನಿರ್ಣಯವನ್ನು ಅನುಸರಿಸಿ ನಗದು ಪರಿಹಾರವನ್ನು ಪಾವತಿಸಲು ಕೋರಿದ ಹಿನ್ನಲೆಯಲ್ಲಿ ಅವರಿಗೆ ಪರಿಹಾರವಾಗಿ ಬಡ್ಡಿ ಎಲ್ಲಾ ಸೇರಿ ರೂ.76,093-57 (ಎಪ್ಪತ್ತಾರು ಸಾವಿರದ ತೊಂಭತ್ಮೂರು ರೂಪಾಯಿಗಳು ಮತ್ತು ಐವತ್ತೇಳು ಪೈಸೆ ಮಾತ್ರ) ಪಾವತಿಸಿ, ಪಾಲಿಕೆಗೆ ಪಡೆಯಲು ಅಭಿಪ್ರಾಯಿಸಲಾಗಿತ್ತು.

ಈ ತೀರ್ಮಾನವನ್ನು ಸಹಾಯಕ ಕಾನೂನು ಅಧಿಕಾರಿ ರವರು ನೀಡಿರುವ ಅಭಿಪ್ರಾಯದ ಮೇರೆಗೆ ಕೈಗೊಂಡು ಈ ಮೊಬಲಗನ್ನು ಪಾವತಿಸಲು ಅನುಮೋದನೆ ನೀಡಲಾಗಿದೆ.

.......................2

ಆದರೆ ಭೂಸ್ವಾಧೀನ ಕಾಯ್ದೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸದೆ ಹಾಗೂ ಐ-ತೀರ್ಪು (ಅವಾರ್ಡ್) ರಚಿಸದೆ ನೇರವಾಗಿ ಪರಿಹಾರ ಪಾವತಿಸಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ.

1. ಈ ವಿಚಾರದಲ್ಲಿ ಸರ್ಕಾರವು ದಿನಾಂಕ:29-08-2010 ರಂದು ಸಂಖ್ಯೆ:ಕಂಇ/23/ಭೂಸ್ವಶಿ/2000 ರ ಮೇರೆಗೆ ಜಿಲ್ಲಾಧಿಕಾರಿಗಳು, ಶಿವಮೊಗ್ಗ, ಇವರಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಪ್ರಕರಣಗಳಲ್ಲಿ ಭೂ ಪರಿಹಾರದ ಶೇ.80 ರಷ್ಟು ಬಡ್ಡಿ ರಹಿತ ಮೊಬಲಗನ್ನು ಮುಂಗಡವಾಗಿ ನೀಡುವ ವಿಚಾರದಲ್ಲಿ ನಿಯಮಾನುಸಾರ ಅವಕಾಶವಿಲ್ಲವೆಂದು ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿರುತ್ತದೆ.

**"ಭೂಸ್ವಾಧೀನ ನಡವಳಿ, ಪೂರ್ಣಗೊಳ್ಳುವ ಮೊದಲೇ ಜಂಟಿ ಅಳತೆ ಕಾರ್ಯ ಪೂರ್ಣಗೊಂಡ ಹಾಗೂ ಭೂಸ್ವಾಧೀನ ಕಾಯ್ದೆ ಕಲಂ 6(1)(ಎ) ರ ನಿರ್ದೇಶನ ನೀಡಲ್ಪಟ್ಟಿದ್ದ ಪ್ರಕರಣಗಳಲ್ಲಿ ಭೂಮಾಲೀಕರ ಒಪ್ಪಿಗೆಯಂತೆ ಜಮೀನುಗಳನ್ನು ಸರ್ಕಾರಿ ಇಲಾಖೆಗಳು ಸ್ವಾಧೀನಕ್ಕೆ ಪಡೆದಿದ್ದಲ್ಲಿ ಶೇ.80 ರಷ್ಟು ಬಡ್ಡಿ ರಹಿತ ಮೊಬಲಗನ್ನು ಪಾವತಿಸಲು ಅವಕಾಶವಿರುವ ಹಾಗೆ ಭೂಸ್ವಾಧೀನ ಕೋರಿಕೆ ಸಂಸ್ಥೆಯವರು ಭೂಸ್ವಾಧೀನ ವೆಚ್ಚಕ್ಕಾಗಿ ಠೇವಣಿ ಇಟ್ಟಿರುವ ಪ್ರಕರಣಗಳಲ್ಲಿ ಅಂದರೆ ಸ್ಥಳೀಯ ಸಂಸ್ಥೆಗಳು, ಮಂಡಳಿಗಳು, ನಗರಸಭೆ ಇತ್ಯಾದಿಗಳಿಗೂ ಸದರಿ ಸರ್ಕಾರಿ ಆದೇಶವು ಅನ್ವಯವಾಗುತ್ತದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ".**

2. ಭೂಸ್ವಾಧೀನ ಕಾಯ್ದೆಯ ಕಲಂ 11 ರನ್ವಯ ಎಲ್ಲಾ ಐ-ತೀರ್ಪುಗಳು ಸರ್ಕಾರದಿಂದ ಅಥವಾ ಅಧಿಕಾರ ಹೊಂದಿದವರಿಂದ, ಪೂರ್ವಾನುಮತಿ ಆಗಲೇಬೇಕು.

3. ಪ್ರಸ್ತುತ ಪ್ರಕರಣದಲ್ಲಿ ಕೆ.ವಿ.ಮಲ್ಲಿಕ್ ರವರ ಜಾಗವನ್ನು ರಸ್ತೆ ನಿರ್ಮಾಣಕ್ಕೋಸ್ಕರ ಭೂಸ್ವಾಧೀನ ಪಡಿಸಿಕೊಳ್ಳಬೇಕೆಂದು, ದಿನಾಂಕ:23-11-1991 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ:37(233) ರಲ್ಲಿ ತೀರ್ಮಾನಿಸಿರುವ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಈವರೆವಿಗೂ ಆಗಿರುವುದಿಲ್ಲ. ಈ ನಿರ್ಣಯವು ಅನುಮೋದನೆ ಆಗದೇ ಭೂಸ್ವಾಧೀನ ಕ್ರಮ ಕೈಗೊಳ್ಳಲು ಅವಕಾಶವೇ ಇರುವುದಿಲ್ಲ.

ಆದರೆ, ಈ ಪ್ರಕರಣದಲ್ಲಿ ಮೇಲ್ಕಂಡ ಯಾವ ಪ್ರಕ್ರಿಯೆಗಳು ನಡೆಯದೇ ಇರುವುದರಿಂದ, ಭೂಮಾಲೀಕರಿಗೆ ನೇರವಾಗಿ ಪರಿಹಾರ ಪಾವತಿಸಲು ಅವಕಾಶವೇ ಇರುವುದಿಲ್ಲ. ಅಲ್ಲದೆ ದಿನಾಂಕ:07-07-2010 ರಂದು ಸ್ವತ್ತಿನ ಮಾಲೀಕರಾದ ಶ್ರೀ.ಮಲ್ಲಿಕ್ ರವರು ಮನವಿ ಸಲ್ಲಿಸಿ 25 ವರ್ಷಗಳ ಹಿಂದೆ ಪಾಲಿಕೆಯು ಸಾರ್ವಜನಿಕ ರಸ್ತೆ ನಿರ್ಮಾಣಕ್ಕಾಗಿ ಉಪಯೋಗಿಸಿಕೊಂಡಿರುವ ತಮ್ಮ ನಿವೇಶನಕ್ಕೆ ಪರಿಹಾರ ನೀಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಭೂಸ್ವಾಧೀನದ ಬಗ್ಗೆ ಈಗ ಹೊಸದಾಗಿ ಪಾಲಿಕೆಯ ನಿರ್ಣಯವನ್ನು ಕೈಗೊಂಡು ಸರ್ಕಾರದ ಅನುಮೋದನೆ ಪಡೆದು, ತದನಂತರ ಭೂಸ್ವಾಧೀನ ಕಾಯ್ದೆಯ ಕಲಂ 4(1) ಪ್ರಕಟಣೆ ಹೊರಡಿಸುವುದು ಸೂಕ್ತವಾಗುತ್ತದೆ. ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:141 (ಹಳೆ ವಾರ್ಡ್ ಸಂಖ್ಯೆ:45) ರಲ್ಲಿ ಬರುವ ವಿಠಲನಗರ (ವಾಲ್ಮೀಕಿನಗರ) ದಲ್ಲಿನ ಸ್ವತ್ತಿನ ಸಂಖ್ಯೆ:90/15-2 ರ ಪೈಕಿ 625 ಚ.ಅ. ಜಾಗವು ಶ್ರೀ. ಕೆ.ವಿ.ಮಲ್ಲಿಕ್ ರವರ ಖಾತೆ ಮತ್ತು ಸ್ವಾಧೀನಾನುಭವದ ಸ್ವತ್ತಾಗಿದ್ದು, ಇದನ್ನು 3ನೇ ಅಡ್ಡರಸ್ತೆಯಿಂದ, 2ನೇ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸಲು ರಸ್ತೆ ನಿರ್ಮಾಣಕ್ಕೆ ಈಗಾಗಲೇ ಉಪಯೋಗಿಸಿಕೊಳ್ಳಲಾಗಿದ್ದು, ನಿವೇಶನದ ವಿವರಗಳು ಖಾತೆ ನಕಲಿನನ್ವಯ ಈ ರೀತಿ ಇರುತ್ತವೆ.

| ಕ್ರ.ಸಂ. | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ವಾರ್ಡ್ ಸಂಖ್ಯೆ | ಬಡಾವಣೆಯ ಹೆಸರು ಮತ್ತು ನಿವೇಶನ ಸಂಖ್ಯೆ | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | ಖಾತೆ ನಂ. |
|---|---|---|---|---|---|
| 1 | ಕೆ.ವಿ.ಮಲ್ಲಿಕ್ | 141 (ಹಳೆ ವಾರ್ಡ್ ಸಂಖ್ಯೆ:45) | ವಿಠಲನಗರ (ವಾಲ್ಮೀಕಿನಗರ) ದ ನಿವೇಶನ ಸಂಖ್ಯೆ:5 | 25 x 25 = 625 ಚ.ಅ. | 90/15-2 |

ರಸ್ತೆ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲಾದ ಈ ಆಸ್ತಿಗೆ ಭೂಪರಿಹಾರವನ್ನಾಗಲೀ ಅಥವಾ ಬದಲೀ ನಿವೇಶನವನ್ನಾಗಲೀ ನೀಡದೇ ಇರುವುದರಿಂದ, ಈ ಸ್ವತ್ತಿಗೆ ಭೂ ಪರಿಹಾರವನ್ನು ನೀಡಬೇಕಾಗುತ್ತದೆ.

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಸಿವಿಸಿ/ಬಿಯುಡಿ/5/2006-07, ದಿನಾಂಕ:17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರ ಇತರೆ ವೆಚ್ಚಗಳು ಈ ರೀತಿ ಇರುತ್ತವೆ.

**'ಅ'**

| | | |
|---|---|---|
| 1. ಚ.ಅ.1 ಕ್ಕೆ ಮಾರ್ಗ ಸೂಚಿ ಬೆಲೆ ರೂ.1300/- ರಂತೆ 625 ಚ.ಅ.ಗಳಿಗೆ | - | 8,12,500-00 |
| 2. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಶೇ.12 ರಷ್ಟು ಮಾರುಕಟ್ಟೆ ಬೆಲೆಯ ಮೇಲೆ ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | - | 97,500-00 |
| 3. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ.30 ರಂತೆ | - | 2,43,750-00 |
| **ಒಟ್ಟು** | - | **11,53,750-00** |

**'ಆ'**

| | | | |
|---|---|---|---|
| 4. ಶೇ. 10 ರಂತೆ ಆಡಳಿತ ವೆಚ್ಚ | | – | 1,15,375–00 |
| 5. ಶೇ. 1 ರಂತೆ ಆಡಿಟ್ ವೆಚ್ಚ | | – | 11,537–00 |
| 6. ಪ್ರಕಟಣಾ ವೆಚ್ಚ (ಅಂದಾಜು) | | – | 1,50,000–00 |
| | ಒಟ್ಟು | – | **2,76,912–00** |
| | ಒಟ್ಟು ಅ+ಆ | – | **14,30,662–00** |

**(ಹದಿನಾಲ್ಕು ಲಕ್ಷದ ಮೂವತ್ತು ಸಾವಿರದ ಆರುನೂರ ಅರವತ್ತೆರಡು ರೂಪಾಯಿಗಳು ಮಾತ್ರ)**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ರೂ.14,30,662/-ಗಳನ್ನು ಭರಿಸುವ ಬಗ್ಗೆ ಅನುಮೋದನೆ ಕೋರಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-09-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ. ನಟರಾಜ)
ಮಹಾಪೌರರು